ಕಡಿಮೆಯಾಗುತ್ತಲೇ ಮಂಜುವಿಗೆ ಶ್ರೀಮಂತರ ಖಯಾಲಿಗಳು ಅಂಟಿಕೊಂಡವು.

ಆಗಲೇ ಅವನಿಗೆ ಪ್ರತ್ಯಕ್ಷಳ ಪರಿಚಯವಾಗಿದ್ದು. ಅವಳ ಮನೆಯ ಪಕ್ಕದ ಸೈಟಿನಲ್ಲಿಯೇ ಅವನದೊಂದು ಪ್ರಾಜೆಕ್ಟ್ ವರ್ಕ್ ಕಾರ್ಯ ನಿರ್ವಹಿಸಲಾರಂಭಿಸಿತು. ಅವನು ದಿನನಿತ್ಯ ಬಂದು ಹೋಗುವ. ಅಲ್ಲಿಯೇ ಸಮಯವನ್ನು ವ್ಯಯಿಸುತ್ತಿರುವ. ಇದೇ ಸಮಯದಲ್ಲಿ ಅವನ ಕಣ್ಣಿಗೆ ಬಿದ್ದವಳು ಪ್ರತ್ಯಕ್ಷ. ಅವಳೂ ಸಂಸಾರಸ್ಥಳು. ಗಂಡ ಮಿಲಿಟರಿಯಿಂದ ಸ್ವಯಂ ನಿವೃತ್ತಿಯನ್ನು ಪಡೆದುಕೊಂಡು ಯಾವುದೋ ದೊಡ್ಡ ಕಂಪನಿಯಲ್ಲಿ ಸೆಕ್ಯುರಿಟಿಯಾಗಿ ಕೆಲಸ ಕಂಡುಕೊಂಡಿದ್ದ. ಆ ಕೆಲಸ ತನಗೆ ಎಷ್ಟು ಅನಿವಾರ್ಯವೆಂದರೆ ವಾರದ ಸಂತೆಗೆ ಹೊರಡುವ ವ್ಯಾಪಾರಿಗಳಂತೆ ನಿಗದಿತ ಸಮಯಕ್ಕೆ ಸರಿಯಾಗಿ ಅಲ್ಲಿರುತ್ತಿದ್ದ. ಡ್ಯೂಟಿ ಮುಗಿಯುತ್ತಲೇ ಅಷ್ಟೇ ಜವಾಬ್ದಾರಿಯಿಂದ ಮನೆಯ ದಾರಿ ಹಿಡಿಯುತ್ತಿದ್ದ.

ಪ್ರತ್ಯಕ್ಷಳಿಗೆ ಸ್ವೇಚ್ಛೆಯಿಂದ ಬದುಕಬೇಕೆನ್ನುವ ಬಯಕೆ. ಸಂಸಾರದಲ್ಲಿ ಮುಳುಗಿದ ಮೇಲೆ ಮನೆ ಮಗು ಜೊತೆಗೆ ಗಂಡನ ಜವಾಬ್ದಾರಿಗಳು ಸೇರಿ ಬದುಕು ಇಷ್ಟೇ ಎಂದು ಆಗುತ್ತಲೇ ಅಲ್ಲಿಂದ ಮಿಂಚಿನಂತೆ ಹೊರಗೆ ಬರುವ ಗಳಿಗೆಗಳಿಗೆ ಕಾಯುತ್ತಿದ್ದಳು. ಆ ಸಮಯದಲ್ಲಿಯೇ ಮಂಜು ಎನ್ನುವ ಮಿಂಚು ಅವಳನ್ನು ಸೆಳೆಯಿತು. ಅದಕ್ಕೆ ಬಲಿಯಾಗಬೇಕಾದ ಸಂದರ್ಭದಲ್ಲಿ ಎಲ್ಲವನ್ನೂ ಅವನ ಬಳಿ ಬಿಚ್ಚಿಟ್ಟಳು.

ಮಂಜುವಿಗೆ ಅವಳ ಸಂಸಾರದ ನಿಸ್ಸಾರ ಕಥೆಯಲ್ಲಿ ಆಸಕ್ತಿಯಿಲ್ಲದೆ ತನಗೆ ದೊರಕಿದ ಅವಕಾಶವನ್ನು ಸಂಪೂರ್ಣ ಬಳಸಿಕೊಳ್ಳುವ ಸ್ವಾರ್ಥ ತುಂಬಿಕೊಂಡು, ಗಗನಕ್ಕೇರುತ್ತಿದ್ದ ಕಟ್ಟಡದ ಮೊದಲ ಅಂತಸ್ತಿನಲ್ಲಿ ತನಗೊಂದು ಕೋಣೆಯನ್ನು ನಿರ್ಮಿಸಿಕೊಂಡ.

ಖರ್ಚಾಗುತ್ತಿದ್ದ ಹಣದಲ್ಲಿ ಪ್ರತ್ಯಕ್ಷಳಿಗೊಂದಿಷ್ಟು ನೀಡಿ ತನ್ನ ಅನಾಚಾರವನ್ನು ನಡೆಸುತ್ತಿದ್ದ. ಸುಲಭದಲ್ಲಿ ಸಿಗುವ ಹಣದ ಅಮಿಷಕ್ಕೆ ಬಲಿಯಾದ ಅವಳು ಗಂಡನಿಂದ ಸಿಗದ ಸುಖವನ್ನು ಮಂಜುವಿನಲ್ಲಿ ಕಂಡು ಮಂಜುವಿನ ಅಧಿಕೃತ ಮನದನ್ನೆಯಾದಳು. ಅಲ್ಲಿಯ ಪ್ರಾಜೆಕ್ಟ್ ಮುಗಿಯುತ್ತಲೇ ಮಂಜುವಿನ ಪ್ರತಿರೂಪವನ್ನು ಹೊತ್ತವಳು ಗಂಡನನ್ನು ರಮಿಸಿದಳು. ಗುಟ್ಟು ಗುಟ್ಟಾಗಿಯೇ ಉಳಿಯಿತು. ಮಂಜು ಈ ಬಗ್ಗೆ ಎಚ್ಚೆತ್ತುಕೊಂಡ. ತನ್ನ ಸಂಸಾರದಲ್ಲಿ ಬಿರುಕು ಕಾಣಿಸುವ ಮುನ್ನ ಅನಧಿಕೃತ ಅಧಿಕಾರವನ್ನು ಪಡೆದುಕೊಂಡವಳನ್ನು ದೂರ ಮಾಡುವ ಯೋಜನೆಯನ್ನು ಹಾಕಿಕೊಂಡ. ಅಷ್ಟರಲ್ಲಿಯೇ ಪ್ರತ್ಯಕ್ಷಳಿಗೆ ನಾಲ್ಕೈದು ಮಂದಿಯ ಪರಿಚಯವಾಗಿತ್ತು. ಅದರಲ್ಲಿ ಮಾನಪ್ಪನೂ ಒಬ್ಬ.

ಮಾನಪ್ಪ ಪೊಲೀಸ್ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದವನು.ಪ್ರತ್ಯಕ್ಷಳಿಗೆ ಮನಸೋತವನಾದರೂ ತೀರಾ ಹಚ್ಚಿಕೊಂಡವನಲ್ಲ. ಅವಳೂ ಅತಿಯಾಗಿ ತಲೆಕೆಡಿಸಿಕೊಂಡವಳಲ್ಲ. ಮುಂದೊಂದು ದಿನ ತನಗೆ ಸಹಾಯಕ್ಕೆ ಬರಬಹುದೆನ್ನುವ ದೂರಾಲೋಚನೆಯಿಂದ ಪೊಲೀಸನ ಸಖ್ಯವನ್ನು ಬೆಳೆಸಿಕೊಂಡವಳು.

ಅವಳು ಲೆಕ್ಕ ಹಾಕಿಕೊಂಡಂತೆ ವಿಚಿತ್ರ ಸಂದರ್ಭ ಎದುರಾಯಿತು. ಮಂಜು ಅವಳನ್ನು ಸಂಪೂರ್ಣವಾಗಿ ದೂರ ಮಾಡುವ ಹುನ್ನಾರ ನಡೆಸುತ್ತಿರುವಾಗಲೇ ಅವಳಿಗೆ ಅದರ ವಾಸನೆ ಬಡಿದು ಒಂದು ರೀತಿಯ ಹಠಕ್ಕೆ ಬಿದ್ದು ಅವನನ್ನು ಹುಡುಕಿಕೊಂಡು ಅವನ ಮನೆಯವರೆಗೂ ಹೋದಳು. ಇನ್ನು ಮನೆಯವರೆಗೂ ಅವಳ ಓಡಾಟ ತನಗೆ ಸಂಚಕಾರವೆಂದು ಅವನು ಒಮ್ಮೆ ಮುಖಾಮುಖಿಯಾದ. 'ನಿನ್ನ ಪ್ರತಿರೂಪ ಹೊತ್ತುಕೊಂಡಿದ್ದೇನೆ. ನನ್ನನ್ನು ವಂಚಿಸಿದರೆ ಸುಮ್ಮನಿರಲಾರೆ. ಎಂದಿನಂತೆ ನನ್ನ ಜೊತೆ ಚೆನ್ನಾಗಿಯೇ ಇರು' ಅವಳು ಎಚ್ಚರಿಸಿದಳು. ಅವನು ತನಗೆ ಅಂಟಬಹುದಾದ ಕೊಳೆ ಅವಳು ಎನ್ನುವುದನ್ನು ಮನಗಂಡ. ಅವಳ ಜೊತೆ ಚೆನ್ನಾಗಿರುವ ಜರೂರತ್ತು ಇಲ್ಲವೆಂದು ವಾದಿಸಿದ. ಅವಳೂ ಬಿಡಲಿಲ್ಲ. ಮಂಜುವಿನ ಪ್ರೀತಿಯ ಕುರುಹು ಹೊಟ್ಟೆಯಲ್ಲಿರುವಾಗ ನಡು ನೀರಲ್ಲಿ ಕೈ ಬಿಟ್ಟರೆ ಮುಂದೆ ಅದನ್ನು ಹೊತ್ತುಕೊಂಡು ಬದುಕುವುದಾದರೂ ಹೇಗೆ? ಈ ಪ್ರಶ್ನೆ ತೀವ್ರವಾಗಿ ಕಾಡಿ ಅವನಿಗೆ ಪಾಟಿಸವಾಲು ಹಾಕದೆ ಬೇರೆ ದಾರಿ ಇಲ್ಲವೆಂದು, 'ಅದು ಹೇಗೆ ನನ್ನಿಂದ ದೂರವಾಗ್ತೀಯೋ ನಾನು ನೋಡ್ತೀನಿ. ನಿನ್ನ ಮನೆಗೆ ಬರುವೆ. ಸಾಧ್ಯವಾದರೆ ತಡೆ' ಎಂದದ್ದೆ, ಆತ ಆವೇಶಕ್ಕೊಳಗಾಗಿ ತನ್ನದೊಂದು ಚಾಲೆಂಜ್ ಅನ್ನು ಮುಂದಿಟ್ಟ. ಅದು ಎಲ್ಲಿಗೆ ಹೋಗಿ ತಲುಪಿತೆಂದರೆ ಅವಳನ್ನು ಖೂನಿ ಮಾಡುವವರೆಗೆ. ಅವನು ಬಾಯಿ ಮುಚ್ಚಿಕೊಂಡು ಸುಮ್ಮನಿದ್ದರೂ ಆಗಿರುತ್ತಿತ್ತೋ ಏನೋ? ಖೂನಿ ಎನ್ನುವ ಪದ ಕೇಳುತ್ತಲೇ ಅದರ